ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡುಗಳಲ್ಲಿ ತಾರತಮ್ಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 57 : (225)

ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ್)

ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಕ್ರಸಂ. ಪ್ರಶ್ನೆ

ಅ) ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳ ವಿತರಣೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉತ್ತರ

ಹೌದು

ಆ) ಹಾಗಿದ್ದಲ್ಲಿ ಯಾವ ರೀತಿ ಹಾಗೂ ಎಂದಿನಿಂದ ಸರಿಪಡಿಸಲಾಗುವುದು.

ಉತ್ತರ

ಅಹವಾಲುಗಳನ್ನು ಪಡೆಯಲಾಗಿದ್ದು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗುತ್ತದೆ. ಇತರರಿಗೆ ಎಪಿಎಲ್ ಪಡಿತರ ಚೀಟಿ ನೀಡಲಾಗುವುದು.

ಕ್ರಸಂ. ಪ್ರಶ್ನೆ

ಇ) ತೇರದಾಳ ಮತ ಕ್ಷೇತ್ರದಲ್ಲಿ ಬಿಪಿಎಲ್ ಕಾರ್ಡುಗಳನ್ನು ಬೇಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು.

ಉತ್ತರ

1.18.982

ಕ್ರಸಂ. ಪ್ರಶ್ನೆ

ಈ) ಬಂದ ಅರ್ಜಿಗಳನ್ನು ಗುರುತಿಸಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದೇ ಹಾಗಿದ್ದಲ್ಲಿ ಎಂದಿನಿಂದ ವಿತರಿಸಲಾಗುವುದು?

ಉತ್ತರ

ಹೌದು ಈಗಾಗಲೇ ವಿತರಣಾ ಕಾರ್ಯ ಪ್ರಾರಂಭವಾಗಿರುತ್ತದೆ.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ. ನನ್ನ ತೇರದಾಳ ಮತ ಕ್ಷೇತ್ರದಲ್ಲಿ ಬಿ.ಪಿ.ಎಲ್. ಕಾರ್ಡುಗಳು ಬೇಡಿ ಬಂದ ಅರ್ಜಿಗಳ ಸಂಖ್ಯೆ ಎಷ್ಟೆಂದು ಪ್ರಶ್ನೆ ಕೇಳಿದ್ದೆ. 1.18.982 ಗಳಷ್ಟು ಅರ್ಜಿಗಳು ಬಂದಿವೆ ಎಂದು ಉತ್ತರ ಕೊಟ್ಟಿದ್ದಾರೆ. ವಿಶೇಷವಾಗಿ ತೇರದಾಳ ಮತ ಕ್ಷೇತ್ರದಲ್ಲಿ ನೇಕಾರರು ಹೆಚ್ಚಾಗಿದ್ದಾರೆ. ಇಲ್ಲಿ ಕೂಲಿ ಜನ. ಬಡಜನರು ಮತ್ತು ನೇಕಾರರು ಹೆಚ್ಚಾಗಿ ವಾಸವಾಗಿರುವುದರಿಂದ ಇವರೆಲ್ಲರಿಗೂ ಕಾರ್ಡ್ ವಿತರಣೆ ಮಾಡಬೇಕಾಗಿರುವುದರಿಂದ ಬಂದಿರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಯೋಗ್ಯವಿದ್ದರೆ ಎಲ್ಲರಿಗು ಕಾರ್ಡ್ ಕೊಡಿ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಹಾಲಪ್ಪ :– ಮಾನ್ಯ ಅಧ್ಯಕ್ಷರೆ. ಈಗಾಗಲೇ 5–9 ರಲ್ಲಿ ಅರ್ಜಿಗಳನ್ನು ಕೊಟ್ಟಿದ್ದಾರೆ. ಎಷ್ಟು ಅರ್ಜಿಗಳಿಗೆ ನೀಡಲಾಗುತ್ತದೆಂದು ಈಗಾಗಲೇ ಗುರುತು ಮಾಡಲಾಗಿದೆ. ಈ ಮಾಹಿತಿಯನ್ನೂ ಸಹ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು :– ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ. ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು :– ಪ್ರಶ್ನೋತ್ತರ ಅವದಿ ಮುಗಿಯಿತು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ. ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು :– ಪ್ರಶ್ನೋತ್ತರ ಅವದಿ ಮುಗಿಯಿತು. ನಾನು ಮತ್ತೆ ಅವಕಾಶ ಕೊಡುವುದಿಲ್ಲ. ನಿಮ್ಮ ಪ್ರಶ್ನೆ ಬಂದಾಗ ನಾನು ನಿಮ್ಮ ಹೆಸರನ್ನು ಕರೆದೆ. ಆದರೆ. ತಾವು ಬಂದಿರಲಿಲ್ಲ. ಈಗ ಪ್ರಶ್ನೋತ್ತರ ಅವದಿ ಮುಗಿಯಿತು. ನಾನು ಮತ್ತೆ ಅವಕಾಶ ಕೊಡುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ. ಇನ್ನೆರೆಡು ಬಹಳ ಮುಖ್ಯವಾದ ಪ್ರಶ್ನೆಗಳಿವೆ. ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು :– ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಏನು ಹೇಳುತ್ತಿದ್ದೇನೆಂದರೆ. ಯಾರು ಪ್ರಶ್ನೆ ಕೇಳಿರುತ್ತಾರೆ. ಅವರು ಮಾತ್ರ ಕೇಳಲಿ ಎಂದರೆ. ಉಪ ಪ್ರಶ್ನೆಗಳನ್ನು ಎಲ್ಲರೂ ಕೇಳಿದರೆ ಇದೇ ಆಗುವುದು. ಇಲ್ಲ. ನಾನು ಅವಕಾಶವನ್ನು